Doc-276
T-D-2

R No KRNN 12

22-4-74



ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi' daily, Mysore 4

ಪ್ರಕಾಶಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ವಿದ್ವಾನ್ ಪಂಡಿತ ಎಂ. ಎಸ್. ಕೃಷ್ಣರಾವ್ 3 ಪು.ಸ

ಮೈಸೂರಿಗೆ ನೀರು ಕೊಡಬಾರದೆಂದು ತಮಿಳುನಾಡು ಮನವಿ

ಬಟ್ಟೆ

ನವದೆಹಲಿ — ದೇಶದಲ್ಲಿಯ ಬಟ್ಟೆ ಉತ್ಪಾದನಾ ಶಕ್ತಿಯನ್ನು ಪೂರ್ತಿಕೆಗೆ 5 ನೇ ಯೋಜನೆ ಅವಧಿಯಲ್ಲಿ ವರ್ಷಕ್ಕೆ 2500 ಮಿಲಿಯ ಮೀಟರು ಬಟ್ಟೆ ಗಿರಣಿಯವರು ತಯಾರಿಸಬೇಕೆಂದು ಖಡ್ಡಾಯ ಮಾಡಲು ಸರಕಾರ ಯೋಜನೆ ಮಾಡಲು ಬಡವರಿಗೆ ಬಟ್ಟೆ ಒದಗಿಸಲಾಗುವದೆಂದೂ ಹೇಳಲಾಗಿದೆ

★

ಕಾವೇರಿ ವ್ಯಾಜ್ಯ

ಮಧುರೈ — ಕಾವೇರಿ ವ್ಯಾಜ್ಯ ವ್ಯವಸ್ಥೆಯಾಗುವವರೆಗೆ ಕರ್ನಾಟಕ ಸರಕಾರವು ಹೇಮಾವತಿ ಮತ್ತು ಕಬಿನಿ ಪ್ರಾಜೆಕ್ಟುಗಳಲ್ಲಿ ನೀರು ತುಂಬಿಕೊಳ್ಳಲು ಅವಕಾಶ ಕೊಡಬಾರದೆಂದು ತಮಿಳುನಾಡು ಸರಕಾರವು ಕೇಂದ್ರವನ್ನು ಒತ್ತಾಯ ಮಾಡಿದೆ

★

ಸೀಮೆ ಎಣ್ಣೆ ಖೋತಾ

ನವದೆಹಲಿ — ರಾಜ್ಯಗಳಿಗೆ ಸೀಮೆ ಎಣ್ಣೆ ಕೊಟಾದಲ್ಲಿ ಖೋತವು ಶೇಕಡ 25 ಕ್ಕೆ ಹೆಚ್ಚಿಸಲಾಗುವುದೆಂದೂ, ಮೇ ಮತ್ತು ಜೂನ್‌ನಲ್ಲಿ ಈ ಖೋತಾ ಮುಂದುವರಿಯುವುದೆಂದೂ ಪೆಟ್ರೋಲ್ ಸಚಿವಾಲಯ ತಿಳಿಸಿದೆ.

ಛತ್ರಿ
ರೇನ್ ಕೋಟುಗಳಿಗೆ
ಬ್ಯಾಂಕ್ ರೋಡ್ ಬಾಹುಸಾರ್
A Firm known for
Genuine Good Business

ರಷ್ಯಾದಿಂದ ಭಾರತಕ್ಕೆ ಎಣ್ಣೆ ಪೈಪ್‌ಲೈನ್

ನವದೆಹಲಿ — ಬಾಕು ಎಣ್ಣೆ ಕ್ಷೇತ್ರದಿಂದ ಭಾರತಕ್ಕೆ ಖಾಯಂ ಆಗಿ ಕಚ್ಚಾ ಎಣ್ಣೆ ಸರಬರಾಜು ಮಾಡಲು ರಷ್ಯವು ಎಣ್ಣೆ ಪೈಪ್‌ಲೈನು ಹಾಕಲು ಯೋಜಿಸಿದೆ — ಈ ಲೈನು ಇರಾನ್ ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನಗಳ ಮೂಲಕ ಬರಬೇಕಾಗಿರುವದರಿಂದ ಆ ಮೂರು ದೇಶಗಳ ಅನುಮತಿಯ ಅವಶ್ಯಕವಿದೆ

★

ಕಾಲ ಕೋಶ

ನವದೆಹಲಿ ಅಖಿಲ ಭಾರತ ಕೇಂದ್ರ ಸರಕಾರಿ ಅಧಿಕಾರಿಗಳ ಸಂಘವು ಮೇ 1 ರಿಂದ ಪ್ರಾರಂಭಿಸುವ ಪತಿಭಟನಾ ಹೋರ ಸಂಬಂಧದಲ್ಲಿ ಭೂಮಿಯೊಳಗೆ " ಕೆಲಸಕ್ಕೆ ಬಾರದ ಮಾತುಗಳು. ಮುರಿದ ಭರವಸೆಗಳು " ಕಾಲ ಕೋಶಗಳನ್ನು ಬಿಡಲಿರುವರು — ಇಂತಹ ಕಾಲಕೋಶಗಳನ್ನು ಡೆಲ್ಲಿ ಮತ್ತು ದೇಶದ 50 ಕಡೆ ಭೂಮಿಗೆ ಬಿಡಲಾಗುವುದು — ಅಡಚಣಿ ಸ್ವಾತಂತ್ರ್ಯ ನಂತರ ಆಡಳಿತ ಭಾಗದಲ್ಲಿಯ ವಿಫಲತೆ ಸಂಕ್ಷಿಪ್ತ ವಿಷಯಗಳಿರುವವು.

★

ಆನಂದರಾಯರು ಉಪವಾಸಕ್ಕೆ ಕೈಗೊಂಡರು

ಬೆಂಗಳೂರು— ಮುಸ್ಕರಿಸಿರುವ ಉಪಾಧ್ಯಾಯರ ಕೇಳಿಕೆ ನೆರವೇರಿಸಲು ಸರಕಾರ ವಿಫಲಗೊಂಡಿರುವದರಿಂದ, ಈ ಸಂಬಂಧದ ಸಂಘಡ ಕಾರ್ಯದರ್ಶಿ ಮಳ್ಳೂರು ಆನಂದರಾವ್ ಎಂ ಎಲ್ ಸಿ ಯವರು ಅನಿರ್ದಿಷ್ಟ ಕಾಲ ಉಪವಾಸ ಪ್ರಾರಂಭಿಸಿದರು.

★

ಚಳವಳಿ ಬೆದರಿಕೆ

ಬೆಂಗಳೂರು — ಅವಶ್ಯ ಪದಾರ್ಥಗಳ ಬೆಲೆ ಏರಿಕೆ ಮತ್ತು ಹೆಚ್ಚುತ್ತಿರುವ ನಿರುದ್ಯೋಗ ಪ್ರತಿಭಟಿಸಿ ನಾಲ್ಕು ವಾಮಪಕ್ಷ ನಾಯಕರು ರಾಜ್ಯದಲ್ಲಿ ಮೇ 1 ರಿಂದ ಚಳವಳಿ ಹೂಡುವುದಾಗಿ ಸರಕಾರವನ್ನು ಎಚ್ಚರಿಸಿರುವರು.

ದುರ್ಬೀನು ನಾಪತ್ತೆ

ಬಾಲಸೋರ್ (ಒರಿಸ್ಸಾ)— ಸಮುದ್ರದ ಮೇಲಿನ ಚಂಡಿಪುರದಲ್ಲಿಯ ಬಲವಾದ ಕಾವಲಿನಲ್ಲಿ ರಕ್ಷಣಾ ಸಲಕರಣೆಗಳ ಸ್ಟೋರ್ಸ್‌ನಲ್ಲಿದ್ದ ರೂ. 1.8 ಲಕ್ಷದ ಉನ್ನತ ಶಕ್ತಿಯ ದುರ್ಬೀನು ಮಾಯವಾಗಿದೆ !

ಪಾಕೆಟ್ ಟೆಲಿಫೋನ್

ನವದೆಹಲಿ— ಭಾರತ, ಆಸ್ಟ್ರೇಲಿಯಾ ಮತ್ತು ಹಂಗೇರಿಯು ಪಾಕೆಟ್ ಟೆಲಿಫೋನು ಸೃಷ್ಟಿಸುವ ಪ್ರಯೋಗ ನಡೆಸುತ್ತಿವೆ ಎಂದು ಗಾಂಧಿನಗರ ಜಿಲ್ಲೆಯ ಅನುಪಘಡನಲ್ಲಿ ಟೆಲಿಫೋನು ವಿನಿಮಯ ಕಟ್ಟಡ ಉದ್ಘಾಟಿಸುತ್ತಾ ಸಂಪರ್ಕ ಸ್ಟೇಟ್ ಸಚಿವ ಶ್ರೀ ಹೇಂ ಸಿಂಗ್ ಹೇಳಿದರು

ಅಪಾರ ಚಿನ್ನ ವಶ

ಹೊಸೂರು— ಬೆಂಗಳೂರಿನಿಂದ ಬರುತ್ತಿದ್ದ ಒಂದು ಕಾರನ್ನು ಹೊಸೂರು ಚೆಕ್‌ಪೋಸ್ಟು ಹತ್ತಿರ ರವಿನ್ಯೂ ಅಧಿಕಾರಿಗಳು ಅಡ್ಡ ಕಟ್ಟಿಸಿದರಲ್ಲಿದ್ದ 2000 ತೊಲ ಚಿನ್ನವನ್ನು ವಶಪಡಿಸಿಕೊಂಡು, ಕಾರ್‌ನಲ್ಲಿದ್ದ ಇಬ್ಬರನ್ನು ಬಂಧಿಸಿದರು.

ಶಿವಪುರಂ ವಿಗ್ರಹ

ಮದರಾಸು— ಒಂದು ಮಿಲಿಯ ಡಾಲರು (ಸುಮಾರು ರೂ. 75 ಲಕ್ಷ) ಮೌಲ್ಯದ ಶಿವಪುರಂ ವಿಗ್ರಹವು ಅಮೇರಿಕಾದಿಂದ ಬರಲಿದೆ — ತಂಜಾವೂರು ಜಿಲ್ಲೆಯಿಂದ ಇದು 1957 ರಲ್ಲಿ ಅಮೇರಿಕಾಕ್ಕೆ ಅಕ್ರಮ ಸಾಗಾಣಿಕೆಯಾಗಿತ್ತು — ಈ ವಿಗ್ರಹವನ್ನು ಡೆಲ್ಲಿ ಮ್ಯೂಸಿಯಂನಲ್ಲಿ ಪ್ರದರ್ಶಿಸುವಂತೆ ಅಮೇರಿಕಾ ಸರಕಾರವು ಭಾರತ ಸರಕಾರವನ್ನು ವಿನಂತಿಸಿದೆ.

★

ವಿಶ್ವ ಜನಸಂಖ್ಯಾ ಸಮ್ಮೇಳನ

ರೊಮೇನಿಯಾದ ಬುಖಾರೆಸ್ಟ್‌ನಲ್ಲಿ ಈ ವರ್ಷ ಆಗಸ್ಟ್‌ನಲ್ಲಿ 3600 ಜನರು— ರಾಜಕಾರಣಿಗಳು, ಅಡಳಿತಗಾರರು, ಅರ್ಥಶಾಸ್ತ್ರಜ್ಞರು, ಆರೋಗ್ಯ ನಿಪುಣರು, ಯೋಜನೆಗಾರರು— ಪ್ರಥಮ ವಿಶ್ವ ಜನಸಂಖ್ಯೆ ಸಮ್ಮೇಳನದಲ್ಲಿ ಭಾಗವಹಿಸಲಿರುವರು — ಅವರ ಬುದ್ಧಿವಂತಿಕೆ ಹೇಗೆ ಫಲಿಸುವುದೋ ನೋಡಬೇಕು — ಈಗ ಪ್ರತಿ ದಿನ 200000 ಹೆಚ್ಚು ಜಾಯಿಗಳಿಗೆ ಆಹಾರ ಒದಗಿಸಬೇಕಾಗಿದೆ.

★

ಜಯಪ್ರಕಾಶರಿಗೆ ಬೆಂಬಲ

ಬೆಂಗಳೂರು— ಬೀಹಾರಿನಲ್ಲಿ ಸರ್ವೋದಯ ನಾಯಕ ಶ್ರೀ ಜಯಪ್ರಕಾಶ ನಾರಾಯಣರು ಹೂಡಿರುವ ಚಳವಳಿಯ ಬೆಂಬಲಕ್ಕೆ ತಾ॥ 23 ರಂದು ವಿಶ್ವವಿದ್ಯಾನಿಲಯದ ಪ್ರೊಫೆಸರರೂ ವಿದ್ಯಾರ್ಥಿಗಳೂ ಮೌನ ಮೆರವಣಿಗೆ ನಡೆಸುವುದಾಗಿ ಸರ್ವೋದಯ ಯುವಜನ ಸಭೆ ಪ್ರಕಟಿಸಿದೆ

ವಿವಿಧ ಬಗೆಯ ಗಣೇಶಗಳು

ಬೆಂಗಳೂರು— ನಾಗರದ ಶ್ರೀ ಗೋವರ್ಧನ್‌ರವರ, ವಿವಿಧ ಬಗೆಯ ಶ್ರೀ ಗಣೇಶ ಕಲಾಕೃತಿಯನ್ನು ಗಂಧದಮರದಲ್ಲಿ ತಯಾರಿಸಲು ಯೋಜಿಸಿರುವರುವದನ್ನು ಪತ್ರಿಕೆಯವರಿಗೆ ತಿಳಿಸಿದರು – ದೇಶದಲ್ಲಿರುವ 400 ತರಹೆ ಗಣೇಶ ವಿಗ್ರಹಗಳ ಫೋಟೋಗಳನ್ನು ತೆಗೆದಿಟ್ಟುಕೊಂಡಿದ್ದಾರೆ. ಈಗಾಗಲೇ ಗಂಧದಮರದಲ್ಲಿ 30 ತಯಾರಿಸಿರುತ್ತಾರೆ,

ನ್ಯಾಯವಾದ ಕೇಳಿಕೆ ನೆರವೇರಲಿ

ಮೈಸೂರು— ಪ್ರೌಢಶಾಲೆಯ ಉಪಾಧ್ಯಾಯರ ನ್ಯಾಯವಾದ ಕೇಳಿಕೆಯನ್ನು, ಪರಿಸ್ಥಿತಿ ಕೈವಿಾರಿ ಹೋಗುವ ಮುಂಜೆ ನೆರವೇರಿಸಲು ಮುಖ್ಯ ಮಂತ್ರಿಗಳನ್ನೂ ವಿದ್ಯಾಮಂತ್ರಿಗಳನ್ನೂ ಶ್ರೀ ಸತ್ಯನಾರಿಾಯಣರಾವ್, ಎಂ. ಎಲ್. ಸಿ. ಯವರು ವಿನಂತಿಸಿರುವರು

ರಾಜ್ಯಗಳಿಗೆ ಸ್ವಾತಂತ್ರ್ಯ

ಮದರಾಸು— ತಮಿಳುನಾಡು ಶಾಸನಸಭೆ 161-24 ವೋಟು ಗಳಿಸಿ, ಸರಕಾರಿ ಠರಾವು ರಾಜ್ಯಗಳಿಗೆ ಪೂರ್ತಾ ಸ್ವಾತಂತ್ರ್ಯ ದೊರೆಯಲು ಕೇಂದ್ರವು ರಾಜ್ಯಾಂಗದಲ್ಲಿ ಕೂಡಲೇ ಬದಲಾವಣೆ ಮಾಡಬೇಕೆಂಬ ಠರಾವನ್ನು ಮಂಜೂರ್ಮಾಡಿತು.

ಸಿನೀಮಾ ಹುಚ್ಚು

ಬೆಂಗಳೂರು— ಒಂದು ಸಂಸಾರದ 56 ವರ್ಷದ ಸೋದರ್ಮ ಅವಳ 18 ಮತ್ತು 16 ವರ್ಷದ ಹೆಣ್ಣು ಮಕ್ಕಳು ಸದಾ ಸಿನಿಮಾಕ್ಕೆ ಹೋಗುತ್ತಿದ್ದುದನ್ನು ಸಂಸಾರದ ಹಿರಿಯ ಮಗನು ತೀವ್ರ ಆಕ್ಷೇಪಿಸಿ ಮನೆಯಲ್ಲಿ ಜಗಳವಾಗಲು, ಆ ಮೂವರು ಹಳೇ ಮದರಾಸು ರಸ್ತೆಯಲ್ಲಿಯ ಒಂದು ಭಾವಿಗೆ ಬಿದ್ದು ಸತ್ತರು.

Quality Printing Neat Binding

Lakshminarasimha Press

Sivarampet, Mysore 1

ಭಾರತದಲ್ಲಿ ಗೋವಧೆ



ಪೂರ್ಣ ನಿಶೇಧವಾಗಲಿ

Contribute Liberally
to the National Defence Fund

ವುಡ್‌ಲಾಂಡ್ಸ್ 19 4 74 ರಿಂದ

ಅವೋಘ ಆರಂಭ

ಪವಿತ್ರ ಪಾಪಿ

ಹಿಂದಿ ಕಲರ್ ಮಹೋನ್ನತ ಚಿತ್ರ ದಿನ 3 ಪ್ರದರ್ಶನಗಳು

ಪಾತ್ರ– ತನುಜ ಬಾಲರಾಜ ಸಹಾನಿ ಐ ಎಸ್ ಜೋಹರ್ ಜಯಶ್ರೀ

ಅಪೆರಾ 19 4 74 ರಿಂದ

ಅಡಿವ್ಮೆ ಪೆಣ್

ಪಾತ್ರ – ಎಂ ಜಿ ಆರ್ ಜಯಲಲಿತ

ರೋಮಾಂಚಕಾರಿ ತಮಿಳು ವರ್ಣ ಚಿತ್ರ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Protect the Cow

Help The Gorakshana

— HumanitarianPropoganda Monthly....

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore